ಜಿಲ್ಲೆಯ ಸಮಸ್ತ ಚಿತ್ರದುರ್ಗ **ನಮ್ಮಜನ** ಪತ್ರಿಕೆ ಓದುಗರಿಗೆ ಹಾಗೂ ಜಾಹೀರಾತುದಾರರಿಗೆ, ಪತ್ರಿಕೆ ಹಂಚಿಕೆದಾರರಿಗೆ ಬೆಳಕಿನ ಹಬ್ಬವಾದ ದೀಪಾವಳಿ ಶುಭಾಶಯಗಳು.
-ಸಂಪಾದಕರು

# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 114
Volume - 01 Issue - 114

ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269
Title- Code: KARKAN 28269

ಚಿತ್ರದುರ್ಗ
Chitradurga

ದಿನಾಂಕ: 14-11-2023 ಮಂಗಳವಾರ
Date: 14-11-2023 Tuesday

ಪುಟ: 4
Page: 4

ಬೆಲೆ : ರೂ.2-00
Price: Rs. 2-00

ಸುದ್ದಿ, ಜಾಹಿರಾತಿಗೆ
9686622252

## ಜನಪದರ ದೀಪಾವಳಿಯ ಬಹುರೂಪಿ ಕರ್ನಾಟಕ





ಲೇಖನ: ಅರುಣ್ ಜೋಳದ ಕೂಡ್ಲಿಗಿ

ಕರ್ನಾಟಕದ ಬಹುಭಾಗಗಳಲ್ಲಿ ಮಳೆ ಇಲ್ಲದೆ 'ಬರ'ದ ಛಾಯೆ ಆವರಿಸಿದೆ. ಇದರ ಮಧ್ಯೆಯೂ ಹಬ್ಬಗಳು ನಗರಗಳಲ್ಲಿ ಸಂಭ್ರಮದಿಂದ ನಡೆದರೆ, ಹಳ್ಳಿಗಳಲ್ಲಿ ಚೂರು ಮಂಕಾಗಿ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಮತ್ತೊಂದು ದೀಪಾವಳಿ ಬಂದಿದೆ. ಇದು ನಗರಕೇಂದ್ರಿತ ಶ್ರೀಮಂತ, ಮಧ್ಯಮವರ್ಗದ ಹಬ್ಬವೆನ್ನುವಂತೆ ಬಿಂಬಿತವಾಗುತ್ತದೆ. ಹೀಗಾಗಿಯೇ ದೀಪಾವಳಿ ಸಂದರ್ಭಕ್ಕೆ ದೊಡ್ಡ ವ್ಯಾಪಾರದ ವಹಿವಾಟು ಶುರುವಾಗುತ್ತದೆ. ಇದನ್ನೆಲ್ಲ ಆಚೆ ಸರಿಸಿ ನೋಡಿದರೆ ದೀಪಾವಳಿ ಗ್ರಾಮೀಣ ಪ್ರದೇಶದ ಬಹುಸಂಸ್ಕೃತಿಯ ಅರಳುವ ಒಂದು ವಿದ್ಯಮಾನ. ಹೀಗೆ ಬಹುಸಂಸ್ಕೃತಿಯ ಬೇರುಗಳನ್ನು ಪರಿಶೀಲಿಸಿದರೆ ದೀಪಾವಳಿಯ ಸಾಂಸ್ಕೃತಿಕ ಲೋಕವೊಂದು ತೆರೆದುಕೊಳ್ಳುತ್ತದೆ.

ನಾವು ಯಾವುದೇ ಹಬ್ಬಗಳನ್ನು ಇಂದು ನಗರ ಕೇಂದ್ರಿತವಾಗಿ ನೋಡುತ್ತಿದ್ದೇವೆ. ಅದೆ ನಿಜದ ಸ್ವರೂಪ ಎಂದು ಬಿಂಬಿಸಲಾಗುತ್ತದೆ. ದೀಪಾವಳಿ ವಿಷಯದಲ್ಲೂ ಹಾಗೆ ಇದೆ. ಆದರೆ ಗ್ರಾಮೀಣ ಜಗತ್ತು ದೀಪಾವಳಿಯನ್ನು ಹೇಗೆ ಪರಿಭಾವಿಸಿದೆ ಎಂದು ಹುಡುಕಿದರೆ ಅಚ್ಚರಿಯಾಗುವಷ್ಟು ವೈವಿಧ್ಯವಿದೆ. ತುಂಬಾ ಫರಕುಗಳನ್ನು ಒಡಲೊಳಗಿಟ್ಟುಕೊಂಡಿದೆ. ಹಾಗೆ ನೋಡಿದರೆ ಜನಪದರ ದೀಪಾವಳಿ ಒಂದಲ್ಲ ಹಲವಿವೆ. ಕರ್ನಾಟಕದ ಪ್ರಾದೇಶಿಕ ಭಿನ್ನತೆಗಳ ಜತೆ, ಹಲವು ಸಮುದಾಯಗಳ ಜತೆ, ಬೇರೆ ಬೇರೆ ದೈವಗಳ ಜತೆ ವಿವಿಧ ಆಕಾರಗಳಲ್ಲಿ ಮೈದಾಳಿದೆ. ಹಾಗಾಗಿ ಇದನ್ನು ಗ್ರಾಮಜಗತ್ತಿನ ಬಹುರೂಪಿ ದೀಪಾವಳಿಗಳು ಎನ್ನಬಹುದು.

ಕೊಳ್ಳೇಗಾಲ ಮತ್ತು ಚಾಮರಾಜನಗರ ಭಾಗದ ಬೇಡಗಂಪಣ ಸಮುದಾಯದ ದೀಪಾವಳಿ ವಿಶಿಷ್ಟವಾಗಿದೆ. ಮದುವೆಯಾಗದ 101 ಹೆಣ್ಣು ಮಕ್ಕಳು ಮಲೆಮಾದೇಶ್ವರನಿಗೆ 'ಹಾಲರಿವೆ ಸೇವೆ' ಎಂಬ ಆಚರಣೆಯನ್ನು ಮಾಡುತ್ತಾರೆ. ಇದು ಬೇಡಗಂಪಣರ ಮಹಿಳೆಯರಿಂದ ಮಾತ್ರ ಸಲ್ಲುತ್ತದೆ. ಇದಕ್ಕೊಂದು ಸೃಷ್ಟಿಪುರಾಣವಿದೆ. ಹಿಂದೆ ಶೇಷಣ್ಣೊಡೆಯ ಮಾದೇಶ್ವರ ಪೂಜೆಗೆ ಹಾಲರಿವೆ ಒಯ್ಯುವಾಗ, ಶೇಷನ ಪರೀಕ್ಷಿಸಲು ಮಾದೇಶ ಕಾಲಿನಿಂದ ಹಾಲರಿವೆ ಉರುಳಿಸುತ್ತಾನೆ. ಆಗ ಶೇಷಣ್ಣ ಮಾದೇಶ್ವರನಿಗೆ ಹಾಲಿಲ್ಲದಾಯಿತೆಂದು ಆತ್ಮಹತ್ಯೆಗೆ ಸಜ್ಜಾಗುತ್ತಾನೆ. ಕೂಡಲೇ ಮಾದೇಶ್ವರ ಭಕ್ತಿಗೆ ಮೆಚ್ಚಿ ಈ ಹಾಲರಿವೆಯಿಂದ ಹರಿದ ಹಾಲು ಹಳ್ಳವಾಗಲಿ, ದೀಪಾವಳಿಯಲ್ಲಿ ಬೇಡಗಂಪಣರ ಕೋರು ಮಹಿಳೆಯರು ಹಾಲರಿವೆ ಸೇವೆ ಮಾಡಲಿ ಎಂದನಂತೆ. ಈಗ ಶೇಷಣ್ಣೊಡೆಯನ ವಂಶಸ್ಥ ಮಹಿಳೆಯರು ಹಾಲರಿವೆ ಸೇವೆ ಮಾಡುತ್ತಾರೆ.

ಹಾಲಕ್ಕಿ ಒಕ್ಕಲಿಗರಲ್ಲಿ ಬಲಿಯ ಆಚರಣೆ ನಡೆಯುವುದು ದೀಪಾವಳಿಯಲ್ಲಿ. ಬಲಿ ಹಾಲಕ್ಕಿಗಳ ಮನೆಗೆ ಬೆಳ್ಳಿ ರಥದಲ್ಲಿ ಬಂದು, ಗೋವಿನ ಮೇಲೆ ಮರಳುತ್ತಾನೆ. ಮಳೆ ನಿಂತು, ಬೆಳೆ ಕೊಯ್ಲಾಗಿ ಹೊಲಗಳಿಂದ ಕಣಗಳಿಗೆ ಬರುತ್ತದೆ. ಪಶುಪಾಲಕರಿಗೆ ನಿರ್ಬಂಧಗಳು ಇಲ್ಲವಾಗುವ ಈ ಕಾಲದಲ್ಲಿ ಬಲಿ ಆಚರಣೆ ಜೀವಪಡೆಯುತ್ತದೆ. ಹಾಗಾಗಿ ದೀಪಾವಳಿ ಕೆಲ ಸಮುದಾಯಗಳಿಗೆ ಮಾಂಸಾಹಾರಿ ಹಬ್ಬ.

ಮಧ್ಯ ಕರ್ನಾಟಕದ ಬೇಡರು ದೀಪಾವಳಿಗೆ ಗುಗ್ಗರಿಹಬ್ಬ ಮಾಡುತ್ತಾರೆ. ಹೊಸಧಾನ್ಯ ಹುರುಳಿ ಜೋಳದೊಂದಿಗೆ ಬಾಳೆಹಣ್ಣು ಬೆಲ್ಲವನ್ನು ಸೇರಿಸಿ ವಿಶೇಷ ಆಹಾರವನ್ನು ಸಿದ್ದಪಡಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಅಪರೂಪದ ಆಚರಣೆಗಳು ದೀಪಾವಳಿಯೊಂದಿಗೆ ಬೆಸೆದುಕೊಂಡಿವೆ. ಬೆಳಗಾಂ ಬಿಜಾಪುರ ಭಾಗದ ಅಲೆಮಾರಿ ಕುರುಬರು ಕುರಿದಡ್ಡಿಗಳಲ್ಲಿ 'ಹಾಲು ಬಿಂದಿಗೆ' ಆಚರಣೆ ಮಾಡುತ್ತಾರೆ. ಕುರಿ ಕುಳ್ಳಿನ ಬೆಂಕಿಯಲ್ಲಿ ಕುರಿಹಾಲು ಕಾಯಿಸಿ ಉಕ್ಕುವ ದಿಕ್ಕಿಗೆ ಮಳೆ-ಬೆಳೆ ಹೆಚ್ಚೆಂದು ನಂಬುತ್ತಾರೆ. ಆ ದಿಕ್ಕಿಗೆ ಕುರಿಗಳೊಂದಿಗೆ ವಲಸೆ ಹೋಗುತ್ತಾರೆ. ಕುರಿಗಾರ ಸಮುದಾಯಗಳು ಕುರಿಯನ್ನು ಲಕ್ಷ್ಮಿ ಎಂದು ಭಾವಿಸುತ್ತಾರೆ. ಹಾಗಾಗಿ ಕುರಿಗಳನ್ನು ಪೂಜಿಸಿ ಓಡಿಸುವ ಆಚರಣೆಯೂ ಇದೆ. ಕುರಿದೊಡ್ಡಿಯನ್ನು ಹೊಲದ ಬೆಳೆಗಳಿಂದ ಅಲಂಕರಿಸಿ ವಿಶೇಷವಾಗಿ ಕುರಿಗಳಿಗೆ ಭಕ್ತಿಯನ್ನು ಅರ್ಪಿಸುವುದಿದೆ.

ಉತ್ತರ ಕರ್ನಾಟಕದ ಕೊಪ್ಪಳ ಕುಷ್ಟಗಿ ಭಾಗದಲ್ಲಿ ಕುಂಬಾರ ಮನೆಯ ಕರಿಬೂದಿಯಿಂದ ಮನೆ ಮುಂದೆ ಎರಡು ದೀಪಸ್ತಂಬ ಬರೆಯುವುದಿದೆ. ಇದಕ್ಕೆ ಕರಿಮಂತ ಎಂದು ಕರೆಯುತ್ತಾರೆ. ಇದಕ್ಕಿರುವ ಮಿತ್ ಕುತೂಹಲವಾಗಿದೆ. ಒಮ್ಮೆ ಪತಿವ್ರತೆ ಲಕ್ಷ್ಮಿಪೂಜೆಗೆ ಅಡ್ಡಿಯಾಗದಿರಲೆಂದು ಕಾವಲಿಗೆ ಮಣ್ಣಿನ ಕರಿ ಮತ್ತು ಮಂಠ ಎಂಬ ಯೋಧರನ್ನು ನಿಲ್ಲಿಸುತ್ತಾಳೆ.

ಪುಟ 3



## ಫಾಸ್ಟ್ ನ್ಯೂಸ್

### ಪಟಾಕಿ ಸಿಡಿತಕ್ಕೆ 26 ಜನರಿಗೆ ಗಾಯ ಆಸ್ಪತ್ರೆಗೆ ದಾಖಲು

ಬೆಂಗಳೂರು:ದೀಪಾವಳಿ ಹಬ್ಬ ಎಂದರೆ ಸಡಗರ ಸಂಭ್ರಮವಾಗಿದೆ. ದೀಪ ಬೆಳಗಿಸಿ, ಪಟಾಕಿ ಸಿಡಿಸಿ ಸಂಬ್ರಮದಿಂದ ಆಚರಿಸುತ್ತಾರೆ. ಆದರೆ ಮೊದಲ ದಿನ ಪಟಾಕಿ ಸಿಡಿತಕ್ಕೆ ಬೆಂಗಳೂರಿನಲ್ಲಿ 26 ಜನ ಗಾಯ ಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಪಟಾಕಿ ಸಿಡಿದು ರವಿವಾರ ಒಂದೇ ದಿನ ಮಕ್ಕಳು ಸೇರಿದಂತೆ 26 ಜನರು ಗಾಯಗೊಂಡಿದ್ದಾರೆ. ಬೆಂಗಳೂರಿನ ನಾರಾಯಣ ನೇತ್ರಾಲಯದಲ್ಲಿ 22 ಜನರು, ಮಿಂಟೋ ಆಸ್ಪತ್ರೆಯಲ್ಲಿ ನಾಲ್ವರು ಚಿಕಿತ್ಸೆ ಪಡೆಯುತ್ತಿದ್ದಾರೆ. ನಾರಾಯಣ ನೇತ್ರಾಲಯ ಮುಖ್ಯಸ್ಥ ರೋಹಿತ್ ಶೆಟ್ಟಿ ಮಾತನಾಡಿ, ಬೆಂಗಳೂರಿನ ನಾರಾಯಣ ನೇತ್ರಾಲಯದಲ್ಲಿ 22 ಜನರು, ಮಿಂಟೋ ಆಸ್ಪತ್ರೆಯಲ್ಲಿ ನಾಲ್ವರು ಚಿಕಿತ್ಸೆ ಪಡೆಯುತ್ತಿದ್ದಾರೆ. 22 ಜನರಲ್ಲಿ 10 ಜನರಿಗೆ ಗಂಭೀರ ಗಾಯಗಳಾಗಿದ್ದು, 12 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಎಲ್ಲರಿಗೂ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ. ಮಿಂಟೋ ಆಸ್ಪತ್ರೆಗೆ ದಾಖಲಾದ ನಾಲ್ವರಲ್ಲಿ ಇಬ್ಬರಿಗೆ ಗಂಭೀರ ಗಾಯಗಳಾಗಿದ್ದು, ಇಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಮಿಂಟೋ ಆಸ್ಪತ್ರೆಯ ವೈದ್ಯರು ಮಾಹಿತಿ ನೀಡಿದ್ದಾರೆ.

### ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಲು ಜಿಲ್ಲಾಧಿಕಾರಿ ಸೂಚನೆ

# ನಿಷೇಧಿತ ಪಟಾಕಿಗಳು ಅಧಿಕಾರಿಗಳ ವಶಕ್ಕೆ





» **ಚಿತ್ರದುರ್ಗ**

ದೀಪಾವಳಿ ಹಬ್ಬದ ನಿಮಿತ್ತ ಚಿತ್ರದುರ್ಗ ನಗರದ ಸರ್ಕಾರಿ ಮಾಧ್ಯಮಿಕ ಶಾಲಾ ಮೈದಾನ (ಪ್ರವಾಸಿಮಂದಿರ ಎದುರು) ಆವರಣದ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದ್ದ ನಿಷೇಧಿತ ಪಟಾಕಿಗಳನ್ನು ಅಧಿಕಾರಿಗಳ ತಂಡ ವಶಕ್ಕೆ ಪಡೆದುಕೊಂಡಿದ್ದು, ಕಡ್ಡಾಯವಾಗಿ ಹಸಿರು ಪಟಾಕಿ ಗಳನ್ನು ಮಾತ್ರ ಮಾರಾಟ ಮಾಡಬೇಕು ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ. ಅವರು ಸೂಚನೆ ನೀಡಿದ್ದಾರೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಹೊರತುಪಡಿಸಿ ಉಳಿದ ಪಟಾಕಿಗಳ ಮಾರಾಟ ಮತ್ತು ಬಳಕೆಗೆ ಸರ್ಕಾರ ನಿಷೇಧಿಸಿದ್ದು, ಪಟಾಕಿ ಮಾರಾಟಗಾರರಿಗೆ ಈ ಬಗ್ಗೆ ಈಗಾಗಲೇ ತಿಳುವಳಿಕೆ ನೀಡಲಾಗಿದೆ. ಉಪವಿಭಾಗಾಧಿಕಾರಿ ಕಾರ್ತಿಕ್ ಅವರ ನೇತೃತ್ವದಲ್ಲಿ ವಿವಿಧ ಅಧಿಕಾರಿಗಳ ತಂಡ ನಗರದ ಸರ್ಕಾರಿ ಮಾಧ್ಯಮಿಕ ಶಾಲಾ ಮೈದಾನದಲ್ಲಿ ಪಟಾಕಿ ಮಾರಾಟ ಮಾಡುತ್ತಿದ್ದ ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ನಿಷೇಧಿತ ಪಟಾಕಿ ಮಾರಾಟ ಮಾಡುತ್ತಿದ್ದುದನ್ನು ಗಮನಿಸಿದೆ. ನಿಷೇಧಿತ ಪಟಾಕಿಗಳನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು, ಸೂಕ್ತ ಕ್ರಮ ಕೈಗೊಂಡಿದ್ದಾರೆ.

ಉಪವಿಭಾಗಾಧಿಕಾರಿ ಕಾರ್ತಿಕ್, ತಹಶೀಲ್ದಾರ್ ಡಾ.ನಾಗವೇಣಿ, ನಗರಸಭೆ ಪೌರಾಯುಕ್ತೆ ರೇಣುಕಾ ಸೇರಿದಂತೆ ವಿವಿಧ ಅಧಿಕಾರಿಗಳು ಪಟಾಕಿ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದ್ದು, ಈ ದಿಸೆಯಲ್ಲಿ ಸರ್ಕಾರ ಪರಿಸರಕ್ಕೆ ಮಾರಕವಾದ ಪಟಾಕಿ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಿದ್ದು, ಎಲ್ಲರೂ ತಪ್ಪದೆ ಹಸಿರು ಪಟಾಕಿಯ ಪಾಕೆಟ್‌ಗಳ ಮೇಲೆ ಲೋಗೋ ಹಾಗೂ ಪ್ರಮಾಣ ಪತ್ರ ಇರುವುದನ್ನು ಖಚಿತಪಡಿಸಿಕೊಂಡೇ ಖರೀದಿಸಬೇಕು. ಪಟಾಕಿ ಮಾರಾಟಗಾರರೂ ಕೂಡ ಹಸಿರು ಪಟಾಕಿಯನ್ನು ಮಾತ್ರ ಮಾರಾಟ ಮಾಡಬೇಕು. ಅಧಿಕಾರಿಗಳು ಮಾರಾಟ ಮಳಿಗೆಗೆ ಆಕಸ್ಮಿಕ ಭೇಟಿ ನೀಡಿ ಪರಿಶೀಲಿಸಲಿದ್ದು, ನಿಷೇಧಿತ ಪಟಾಕಿ ಕಂಡುಬಂದಲ್ಲಿ ವಶಕ್ಕೆ ಪಡೆದು ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯ ಎಲ್ಲ ಸಾರ್ವಜನಿಕರು ಹಾಗೂ ಪಟಾಕಿ ಮಾರಾಟಗಾರರು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಅವರು ತಿಳಿಸಿದ್ದಾರೆ.




# ಬಹುಗ್ರಾಮ ಕುಡಿಯುವ ನೀರು ಕಾಮಗಾರಿ ಪರಿಶೀಲಿಸಿದ ಸಿಇಒ



» **ಚಿತ್ರದುರ್ಗ**

ಹಿರಿಯೂರು ತಾಲ್ಲೂಕಿನ ವಿ.ವಿ.ಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿ.ವಿ.ಸಾಗರದಿಂದ ಹೊಳಲ್ಕೆರೆತಾಲ್ಲೂಕಿನಜನವಸತಿಗಳಿಗೆಬರುವ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನಯಡಿ ಬರುವ ಶುದ್ಧ ಕುಡಿಯುವ ನೀರಿನ ಘಟಕದ ಕಾಮಗಾರಿಗಳನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಪರಿಶೀಲನೆ ನಡೆಸಿದರು.



ಬಹುಗ್ರಾಮಕುಡಿಯುವನೀರುಸರಬರಾಜು ಯೋಜನೆಯಡಿ ವಿನ್ಯಾಸ, ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ ವಿಧಾನದ ಮೂಲಕ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ 215 ಜನ ವಸತಿ ಮತ್ತು ಹೊಳಲ್ಕೆರೆ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆ ಇದರ ಅಂದಾಜು ಮೊತ್ತ 367 ಕೋಟಿ ಈ ಕಾಮಗಾರಿಯನ್ನು ಮಂಗಳೂರಿನ ಅಮರ್ ಇನ್‌ಪ್ರಾ ಪ್ರಾಜೆಕ್ಟ್‌ಗೆ ವಹಿಸಿದ್ದು. ಈ ಕಾಮಗಾರಿಯಲ್ಲಿ 23 ಎಂ.ಎಲ್.ಡಿ ಶುದ್ಧ ಕುಡಿಯುವ ನೀರಿನ ಘಟಕ, 14- ಝಡ್. ಬಿ.ಟಿ, 2-ಎಂ.ಬಿ.ಟಿ ಹಾಗೂ 541 ಕಿ.ಮೀ ಪೈಪ್ ಲೈನ್ ಮಾರ್ಗ ಅಳವಡಿಕೆಗಳಿದ್ದು, ಈ ಕಾಮಗಾರಿಯಲ್ಲಿ ಶೇ.75 ರಷ್ಟು ಶುದ್ಧ ಕುಡಿಯುವ ನೀರಿನ ಘಟಕ ಹಾಗೂ 480 ಕಿ.ಮೀ ಪೈಪ್ ಲೈನ್ ಮಾರ್ಗ ಅಳವಡಿಕೆಯ ಕಾಮಗಾರಿಯು ಪೂರ್ಣಗೊಂಡಿದೆ ಹಾಗೂ ವಾಣಿವಿಲಾಸ ಸಾಗರದಲ್ಲಿ ಜಾಕ್ವೆಲ್ ಕಾಮಗಾರಿಯ ಪಿಲ್ಲಿಂಗ್ ಮೆಥಡ್ ಕೆಲಸ ಪ್ರಗತಿಯಲಿದ್ದು, ಈ ಸಂಪೂರ್ಣ ಕಾಮಗಾರಿಯನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಸ್.ಜೆ.ಸೋಮಶೇಖರ್ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಡಾ.ರಂಗಸ್ವಾಮಿ, ಕಾರ್ಯ ಪಾಲಕ ಇಂಜಿನಿಯರ್ ಬಸಣ್ಣಗೌಡ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನೀಲಕಂಠಪ್ಪ, ಎ.ಇ ಕೃಷ್ಣಮೂರ್ತಿ, ಜೆ.ಇ ಶಿವಕುಮಾರ ಹಾಗೂ ಅಮರ್ ಇನ್‌ಪ್ರಾ ಪ್ರಾಜೆಕ್ಟ್ ಕಂಪನಿಯ ಪ್ರಾಜೆಕ್ಟ್ ಮ್ಯಾನೇಜರ್ ಸೆಲ್ವ ಶೇಖರ್ ಇದ್ದರು.




## ನಾವಿಬ್ರೂ ಕ್ಲಾಸ್‌ಮೇಟ್ಸ್: ವೇದಿಕೆ ಮೇಲೆ ಒಂದಾದ ಡಿಕೆಶಿ, ಕ್ರೇಜಿಸ್ಟಾರ್ ದೋಸ್ತಿ



» **ಬೆಂಗಳೂರು**

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಬಾಲ್ಯದಲ್ಲಿ ಕ್ಲಾಸ್‌ಮೇಟ್ ಆಗಿದ್ದ ಖ್ಯಾತ ನಟನ ಬಗ್ಗೆ ಮಾತನಾಡಿದ್ದು, ಕ್ರೇಜಿಸ್ಟಾರ್ ರವಿಚಂದ್ರನ್ ಹಾಗೂ ನಾನು ಒಂದೇ ತರಗತಿಯಲ್ಲಿ ಓದುತ್ತಿದ್ದ ವಿಚಾರವನ್ನು ರಿವೀಲ್ ಮಾಡಿದ್ದಾರೆ.

ಖಾಸಗಿ ಮನರಂಜನಾ ವಾಹಿನಿಯ ಕಾರ್ಯಕ್ರಮ ವೊಂದಕ್ಕೆ ಮುಖ್ಯ ಅತಿಥಿಯಾಗಿ ಹೋಗಿದ್ದ ಡಿಕೆಶಿ, ಈ ವಿಚಾರವನ್ನು ಬಹಿರಂಗಪಡಿಸಿದ್ದಾರೆ.

ನಾನು ಮತ್ತು ರವಿಚಂದ್ರನ್ ಒಂದೇ ಸ್ಕೂಲ್‌ನಲ್ಲಿ ಓದುತ್ತಿದ್ದೆವು. ಹಾಗಾಗಿ, ಕಪಾಲಿ ಚಿತ್ರಮಂದಿರದಲ್ಲಿ ಅವರ ಪ್ರೇಮಲೋಕ ಸಿನಿಮಾಗೆ ಹೋಗಿದ್ದೆ ಎಂದು ಆ ದಿನಗಳನ್ನು ಮೆಲುಕು ಹಾಕಿದರು.

ಆಗ ಅಲ್ಲೇ ಇದ್ದ ನಟ ರವಿಚಂದ್ರನ್ ಅವರು ವೇದಿಕೆ ಬಂದಾಗ ಇಬ್ಬರೂ ಹೆಗಲ ಮೇಲೆ ಕೈ ಹಾಕಿಕೊಂಡು ದೋಸ್ತಿ ದಿನಗಳನ್ನು ನೆನೆದರು. ಇಷ್ಟೇ ನಮ್ಮ ಫ್ರೆಂಡ್‌ಶಿಪ್, ಇಬ್ಬರೂ ಹೀಗೆ ಸಿಕ್ಕಾಗ ಹೆಗಲಮೇಲೆ ಕೈಹಾಕಿ ಬೆನ್ನು ತಟ್ಟಿಕೊಳ್ಳುತ್ತೇವೆ. ನಾವು ನಗ್ತೀವಿ ಎಂದರು.ಶಾಲಾ ದಿನಗಳ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ರವಿಚಂದ್ರನ್, ನಾವು ಒಳಗೆ ಹೋಗಿದ್ರೆ ತಾನೆ? ಎಂದು ಜೋರಾಗಿ ನಕ್ಕರು. ಡಿಸಿಎಂ ಡಿ.ಕೆ.ಶಿವಕುಮಾರ್ ಕೂಡ, ನನ್ನನ್ನು ಸ್ಕೂಲ್‌ನಿಂದ ಓಡಿಸಿಬಿಟ್ರು ಎಂದು ಹೇಳಿದರು. ಈ ಮಾತು ಕೇಳಿ ವೇದಿಕೆಯಲ್ಲಿದ್ದ ಜನರು ನಗೆಗಡಲಲ್ಲಿ ತೇಲಿದರು. ನನಗೆ ಹೆಚ್ಚು ಇಷ್ಟವಾದ ಸಿನಿಮಾ ಡಾ.ರಾಜ್‌ಕುಮಾರ್ ಅಭಿನಯದ ಸತ್ಯಹರಿಶ್ಚಂದ್ರ. ಇದನ್ನು ಹತ್ತಕ್ಕೂ ಹೆಚ್ಚು ಬಾರಿ ವೀಕ್ಷಿಸಿದ್ದೇನೆ ಎಂದೂ ಡಿ.ಕೆ.ಶಿವಕುಮಾರ್ ಹೇಳಿದರು.

## ರಾಜ್ಯದ ಎಲ್ಲಾ ಎ ಮತ್ತು ಬಿ ಗ್ರೇಡ್ ದೇವಾಲಯಗಳಿಗೆ 'ಮಾಂಗಲ್ಯ ಭಾಗ್ಯ' ಯೋಜನೆ

» **ಬೆಂಗಳೂರು**

ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಮಾಂಗಲ್ಯ ಭಾಗ್ಯ ಯೋಜನೆಯನ್ನು ರಾಜ್ಯದ ಎಲ್ಲಾ ಎ ಮತ್ತು ಬಿ ಗ್ರೇಡ್ ದೇವಾಲಯಗಳಿಗೆ ವಿಸ್ತರಣೆ ಮಾಡಿ ಆದೇಶ ಹೊರಡಿಸಿದೆ. ರಾಜ್ಯದ ಬಡ ವರ್ಗದ ವಧು-ವರರ ಸರಳ ವಿವಾಹಕ್ಕೆ ಸಿದ್ಧರಾಗಿರುವವರಿಗೆ ಅನ್ನಭಾಗ್ಯದಂತೆ ಮಾಂಗಲ್ಯ ಭಾಗ್ಯಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ.ಮಾಂಗಲ್ಯ ಭಾಗ್ಯ ಯೋಜನೆಯಡಿ ವರನಿಗೆ ಅಂಗಿ, ಧೋತಿ ಹಾಗೂ 5,000 ರೂ. ನಗದು ಮತ್ತು 8 ಗ್ರಾಂ. ಚಿನ್ನದ ತಾಳಿ ಗುಂಡುಗಳನ್ನು ನೀಡಲಾಗುತ್ತದೆ. ಜೊತೆಗೆ ರಾಜ್ಯದ ಎಲ್ಲಾ ಎ, ಬಿ ಗ್ರೇಡ್ ದೇವಾಲಯಗಳಲ್ಲಿ ಯೋಜನೆ ಜಾರಿಗೆ ತರಲಾಗುತ್ತಿದೆ. 2023 ರ ನವೆಂಬರ್, ಡಿಸೆಂಬರ್ ಮತ್ತು 2024 ರ ಜನವರಿಯಲ್ಲಿ ಸಾಮೂಹಿಕ ವಿವಾಹಕ್ಕಾಗಿ ವಧು-ವರರ ಹೆಸರು ನೋಂದಾಯಿಸಿಕೊಳ್ಳಲು ಸುತ್ತೋಲೆ ಹೊರಡಿಸಲಾಗಿದೆ.

# ಜನಪದರ ದೀಪಾವಳಿಯ ಬಹುರೂಪಿ ಕರ್ನಾಟಕ



» ಮೊದಲ ಪುಟದಿಂದ

ಇವಳ ಭಕ್ತಿ ಮೆಚ್ಚಿ ಸ್ವತಃ ಲಕ್ಷ್ಮಿಯೇ ಮನೆಗೆ ಬರುತ್ತಾಳೆ. ಆಗ ಕಾವಲಿನ ಕರಿ ಮಂತರು ಲಕ್ಷ್ಮಿಯನ್ನು ತಡೆದಾಗ ಕೋಪಗೊಂಡು ಇವರನ್ನು ಸಂಹರಿಸುತ್ತಾಳೆ. ಇದನ್ನು ಕಂಡ ಪತಿವ್ರತೆ ಗೋಳಾಡಿ ಲಕ್ಷ್ಮಿಯಿಂದ ಮರುಜೀವ ಪಡೆಯುತ್ತಾಳೆ. ಈ ನೆನಪಿಗೆ ಕರಿಮಂತ ನ ಆಚರಣೆ ನಡೆದುಕೊಂಡುಬಂದಿದೆ. ಲಕ್ಷ್ಮಿಪೂಜೆಗೆ ಅಡ್ಡಿಯಾಗದು ಎಂದು ನಂಬುತ್ತಾರೆ.

ಅಂತೆಯೇ ಹುಲಿಜಂತಿಯಲ್ಲಿ ನಡೆವ ಕುರುಬರ ಮಾಳಪ್ಪನ ಮುಂಡಾಸು ಆಚರಣೆಯೊಂದಿದೆ. ದೀಪಾವಳಿ ಅಮವಾಸ್ಯೆಗೆ ಮಾಳಪ್ಪನ ಸಮಾಧಿ ಮೇಲೆ ಯಾವ ಕಡೆ ಮುಂಡಾಸ ಹೆಚ್ಚು ಬಿದ್ದಿರುತ್ತದೋ ಆ ಕಡೆ ಮಳೆ-ಬೆಳೆ ಹೆಚ್ಚೆಂದು ತಿಳಿಯುತ್ತಾರೆ. ಈ ಸಂದರ್ಭದ ಮಾಳಪ್ಪನ ಜಾತ್ರೆಗೆ ಗುರು ಬೀರಪ್ಪನ ಸಾಕುಮಗ ಬುಳ್ಳಪ್ಪ ಉಟಗಿ ಬರಮಲಿಂಗ, ಸೂನ್ಯಳ ವಿಠಲ, ಹುನೂರಿನ ಬೀರಪ್ಪ, ಬೀರಪ್ಪನ ತಂಗಿ ಶೀಲವಂತೆ ಸಿರಿಕೋನ ಜೀರಂಕಲಗಿ ಬೀರಪ್ಪ ದೈವಗಳ ಪಲ್ಲಕ್ಕಿಗಳು ಆಗಮವಾಗುತ್ತವೆ. ಈ ಪಲ್ಲಕ್ಕಿಗಳ ಉತ್ಸವ ರೋಮಾಂಚನಕಾರಿಯಾಗಿರುತ್ತದೆ. ಇದೇ ದೀಪಾವಳಿಗೆ ಜತ್ತ ತಾಲೂಕಿನ ಉಮದಿ ಮಲಕಾರಿಸಿದ್ಧ ಹಾಗೂ ಮಂಗಳವೇಡ ತಾಲೂಕಿನ ಡೋಣಜದ ಮಹಾಸಿದ್ಧನ ಜಾತ್ರೆಗಳು ನಡೆಯುತ್ತವೆ.

ದೀಪಾವಳಿ ಪಾಡ್ಯಕ್ಕೆ ನಡೆವ ಭೀಮಾಂಬಿಕೆಯ ಜಾತ್ರೆಯಲ್ಲಿ ಬಂದವರಿಗೆಲ್ಲಾ ಸಂಗಟಿ ಸಾರಿನ ಪ್ರಸಾದವನ್ನು ವಿತರಿಸುತ್ತಾರೆ. 'ಸಂಗಟಿ ಉಂಡು ಸಂಕಟ ಕಳೆದುಕೊಳ್ಳಿರಿ' ಎಂದು ಭೀಮವ್ವ ವಚನ ನೀಡಿದ್ದಾಳೆಂದು ಜನ ನಂಬುತ್ತಾರೆ.

ತುಳುನಾಡಿನ ನಲಿಕೆ(ಪಾಣಾರ) ಸಮುದಾಯ ದೀಪಾವಳಿಯಲ್ಲಿ ಮಾಂಕಾಳಿ ಕುಣಿತ ನಡೆಸುತ್ತಾರೆ. ದೀಪಾವಳಿಯ ವೇಳೆ ಹೊಸ ಬತ್ತದಿಂದ ಮಡಿಯಲ್ಲಿ ತಯಾರಿಸಿದ ಅವಲಕ್ಕಿಯನ್ನು ನೈವೇದ್ಯವಾಗಿ ಅರ್ಪಿಸುವುದಿದೆ. ತನ್ನದಾಗಿದ್ದ ನಾಡಿನ ಬೆಳೆ ಭಾಗ್ಯಗಳನ್ನು ನೋಡಲು ಬರುವನೆನ್ನಲಾದ ಬಲೀಂದ್ರನಿಗೂ ಹೊಸ ಅವಲಕ್ಕಿಯ ಔತಣವನ್ನು ನೀಡುತ್ತಾರೆ.

ಲಂಬಾಣಿ ಮಹಿಳೆಯರಿಗೆ ದೀಪಾವಳಿ ವಿಶಿಷ್ಠವಾಗಿದೆ. ಇವರು ಲಕ್ಷ್ಮಿಪೂಜೆಗೆ ಮೊದಲು ಗೋಪೂಜೆ ಮಾಡುತ್ತಾರೆ. ಅಮವಾಸ್ಯೆಯ ರಾತ್ರಿ ಶೃಂಗರಿಸಿಕೊಂಡ ಯುವತಿಯರು ಹರಳೆಣ್ಣೆ ದೀಪದಿಂದ ತಾಂಡಾ ನಾಯಕನಿಗೆ ಬೆಳಗುತ್ತಾರೆ. ತಾಂಡಾದ ಮನೆಗಳಿಗೆ ಆರತಿ ಹೋದ ನಂತರ ಕಾಣಿಕೆಯಾಗಿ ಹಣವನ್ನು ಥಾಕಣಿ (ಪಣತಿ)ಯಲ್ಲಿ ಹಾಕುತ್ತಾರೆ. ಆಗ ಹುಡುಗಿಯರು ಮೇರಾ (ಆರತಿ) ಗೀತೆ ಹಾಡುತ್ತಾರೆ. 'ಬಾಪು ತೋನ ಮೇರಾ/ ವರ್ಷೆ ದಾಡೇರ ಕೋಟ ದವಾಳಿ/ಯಾರಿ ತೋನ ಮೇರಾ/ ವರ್ಷೆ ದಾಡೇರ ಕೋಟ ದವಾಳಿ/ಭೀಯಾ ತೋನ ಮೇರಾ/ವರ್ಷೆ ದಾಡೇರ ಕೋಟ ದವಾಳಿ' ಎನ್ನುವಂತಹ ಹಾಡುಗಳಲ್ಲಿ ತಂದೆ, ತಾಯಿ ಸಹೋದರರ ಗುಣಗಾನ ಮಾಡುತ್ತಾರೆ.

ಉತ್ತರ ಕನ್ನಡ ಭಾಗದ ಮುಕರಿ ಸಮುದಾಯದ ಮಹಿಳೆಯರಿಗೆ ದೀಪಾವಳಿ ದೊಡ್ಡ ಹಬ್ಬ. ವಾರಗಟ್ಟಲೆ ಹಬ್ಬದ ತಯಾರಿ ಮಾಡುತ್ತಾರೆ. ದೀಪಾವಳಿಯ ನೀರು ಮೀಯುವ ದಿನ ನಸುಕಿನಲ್ಲಿ ಸ್ನಾನ ಮಾಡಿ, ಒಂದು ಹಲಗೆಯ ಮಣೆಯ ಮೇಲೆ ಕುಡಿ ಬಾಳೆಯನ್ನಿಟ್ಟು ಅದರ ಮೇಲೆ ಅಕ್ಕಿ ಹರಗಿ ಮೊಗ ಕಾಯಿಯನ್ನಿಟ್ಟು ಅದಕ್ಕೆ ಮಸಿಯಿಂದ ಮೀಸೆಯಿರುವ ಮುಖದಾಕೃತಿಯನ್ನು ಬಿಡಿಸಿ ಬಲೀಂದ್ರನೆಂದು ಪೂಜಿಸುತ್ತಾರೆ. ಮುಕರಿ ಅಜ್ಜಿಯರು ಮಕ್ಕಳಿಗೆ ಹಬ್ಬದ ಸಂಜೆ ಬಲೀಂದ್ರನ ಕತೆ, ಬಸ್ಯಾ ಹುಲಿ ಸವಾರಿ ಮಾಡಿದ ಕತೆ ಹೇಳುತ್ತಾಳೆ.

ಆಗೇರರ ಸಮುದಾಯ ದೀಪಾವಳಿಯನ್ನು 'ದೇಪಳಿಗ' ಹಬ್ಬ ಎನ್ನುತ್ತಾರೆ. ಎಣ್ಣೆ ಸ್ನಾನ ಮಾಡುವ ಕಾರಣಕ್ಕೆ 'ನೀರ ಮೀಯಾ ಹಬ್ಬ' ಎಂದೂ ಕರೆಯುತ್ತಾರೆ. ದೇಪಳಿಗದ ಹಿಂದಿನ ದಿನ ಹೆಂಗಸರದು 'ಅಡಕಲ'ದಲ್ಲಿ (ದೊಡ್ಡ ಮಣ್ಣಿನ ಮಡಕೆ) ನೀರು ತುಂಬುವ ಸಂಭ್ರಮ. ಅಡಕಲನ್ನು ತೊಳೆದು ಶೇಡಿ ಹಲಿ ಹೊಯ್ದು ಅಡಕಲ ಕೊರಳಿಗೆ ಹಿಂಡಲಕಾಯಿ ಬಳ್ಳಿ-ಹೂಮಾಲಿ ಸುತ್ತಿ ಅಲಂಕರಿಸುತ್ತಾರೆ. ನೀರಿಗೆ ಬೇವಿನ ಎಲೆ, ನೇರಳೆ ಚಕ್ಕೆ ಹಾಕುತ್ತಾರೆ. ಚತುರ್ದಶಿಯ ದಿವಸ ಎಣ್ಣೆ ಹಚ್ಚಿ ಸ್ನಾನ ಮಾಡುತ್ತಾರೆ.

ದೀಪವಾಳಿಯಲ್ಲಿ ಕಹಿ ಬಳಕೆಯೇ ಒಂದು ವಿಶೇಷ.





ಹಿಂಡಲಕಾಯವನ್ನು ಕಾಲಿನಿಂದ ಮೆಟ್ಟಿ ಒಡೆದು ಬೀಜವನ್ನು ಹಣೆಗೆ ಇಟ್ಟುಕೊಳ್ಳುವುದರ ಜೊತೆಗೆ (ವಿಷ್ಣು ಬಲಿಚಕ್ರವರ್ತಿಯನ್ನು ಮೆಟ್ಟಿದ ಸಾಂಕೇತಿಕ ಆಚರಣೆ) ಕಹಿಬೇವು, ಓಮ (ಅಜವಾನ). ಜೀರಿಗೆ ಅರೆದು ಕಹಿ ಮದ್ದನ್ನು ಮಾಡಿ ಕುಡಿಯುತ್ತಾರೆ. ಮೊಗೆಕಾಯಿಯ ಕಡುಬು ಈ ಹಬ್ಬದ ವಿಶೇಷ ಖಾದ್ಯ. ಅಂಕೋಲ ಭಾಗದಲ್ಲಿ ಮಣ್ಣಿನ ಹೊಂಡೆ ರಚಿಸಿ ಅದನ್ನು ಬಲೀಂದ್ರನ ಕೋಟೆ ಎಂದು ಕರೆಯುತ್ತಾರೆ. ಮನೆಗಳ ಪೂಜಾ ಕೋಣೆಯಲ್ಲಿ ಬೋರಜ್ಜಿ ಮತ್ತು ಬಲೀಂದ್ರನ ಮಣ್ಣಿನ ಮೂರ್ತಿ ಮಾಡಿ ಆರಾಧಿಸಿವ ವಿಶಿಷ್ಠತೆ ಇದೆ.

ಬಾಗಲಕೋಟೆಜಿಲ್ಲೆಯಸಿರೂರಿನಲ್ಲಿಕರ್ನಾಟಕದಲ್ಲಿ ಬೇರೆಲ್ಲೂ ಕಾಣದ ಆಚರಣೆಯೊಂದಿದೆ. ಪಾಡ್ಯದ ಮಧ್ಯರಾತ್ರಿ ಕೆರೆಯಂಗಳದ ಸಾಮಘಡಿ(ಕುಸ್ತಿ ತಾಲೀಮಿನ ಸ್ಥಳ)ಗೆ ಕುಸ್ತಿ ಜಟ್ಟಿಗಳೆಲ್ಲಾ ಮೆರವಣಿಗೆಯಲ್ಲಿ ಬಂದು ಸಾಮು ತೆಗೆಯುತ್ತಾರೆ. ನಂತರ ಎರಡು ಗರಡಿಮನೆಯವರ ಮಧ್ಯೆ ಸ್ಪರ್ಧೆಯೂ ಏರ್ಪಡುತ್ತದೆ. ಹೀಗೆ ಸಾಮು ತೆಗೆಯುವಾಗ ಇದಕ್ಕೆ ಪೂರಕವಾದ ಜನಪದ ಗೀತೆಗಳನ್ನು ಹಾಡಲಾಗುತ್ತದೆ. ಮಲೆನಾಡಿದ ಒಕ್ಕಲಿಗರು ಮಾಡುವ ಮೇಳಿಪೂಜೆ ರೈತಾಪಿ ಬದುಕನ್ನು ಬಿಂಬಿಸುತ್ತದೆ. ಬೇಸಾಯದ ಎಲ್ಲಾ ಸಾಮಗ್ರಿಗಳನ್ನು ಒಪ್ಪವಾಗಿಟ್ಟು, ಬೆಳೆಯುವ ಎಲ್ಲಾ ಬೆಳೆಗಳನ್ನು ಜೋಡಿಸಿ ವಿಶಿಷ್ಠವಾಗಿ ಪೂಜೆ ಮಾಡಲಾಗುತ್ತದೆ. ಕೆಲವೆಡೆ ಸೆಗಣಿಯಿಂದ ದೇವಿ ಮೂರ್ತಿಮಾಡಿ ಆರಾಧಿಸುವ ಪದ್ದತಿ ಇದೆ. ಇದಕ್ಕವರು ಕೆರಕ ಎಂದು ಕರೆಯುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಹಾಲೆಮರದ ಕಂಬಕ್ಕೆ ಶೃಂಗಾರ ಮಾಡಿ ಪೂಜೆ ಮಾಡುವುದಿದೆ.

ಉತ್ತರ ಕನ್ನಡ ಜಿಲ್ಲೆಯ ಕೆಲವೆಡೆ ದೀಪಾವಳಿಯನ್ನು ದೊಡ್ಡಹಬ್ಬ ಎಂದು ಕರೆಯುತ್ತಾರೆ. ಇದರಲ್ಲಿ ಗೋವುಗಳನ್ನು ಅಲಂಕರಿಸುತ್ತಾರೆ. ಎತ್ತುಗಳ ಕೊರಳಿಗೆ ನೋಟಿನ ಹಾರ, ಬೆಳ್ಳಿ ಬಂಗಾರದ ಸರಗಳನ್ನು ಹಾಕುವುದು ಮದುಮಗನಂತೆ ಬಾಸಿಂಗ ಕಟ್ಟಿ ಶೃಂಗಾರ ಮಾಡುವುದು, ಹೀಗೆ ಶೃಂಗರಿಸಿದ ಎತ್ತು ಆಕಳ ಜಾನುವಾರುಗಳನ್ನು ಪೂಜಿಸಿ ಊರಮುಂದೆ ತಂದು ಎಲ್ಲರೂ ಸಂಭ್ರಮಿಸುವುದಿದೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ದೀಪಾವಳಿಗೆ ಮಣ್ಣಿನ ಬೊಂಬೆಗಳನ್ನು ಮಾಡುವುದಿದೆ. ಇದರಲ್ಲಿ ಕೋಟೆಕೊತ್ತಲಗಳನ್ನು ಮಾಡಿ ಶಿವಾಜಿಯ ಪ್ರತಿಮೆ ಮಾಡುವುದಿದೆ. ಈ ಮಣ್ಣಿನ ಬೊಂಬೆಗಳು ವರ್ತಮಾನದ ವಿದ್ಯಮಾನಗಳನ್ನು ಆಧರಿಸಿಯೂ ಗೊಂಬೆಗಳನ್ನು ಮಾಡಲಾಗುತ್ತದೆ. ಹಾಗಾಗಿ ಚಿಕ್ಕೋಡಿ ಭಾಗದವರಿಗೆ ದೀಪಾವಳಿಯೆಂದರೆ ಮಣ್ಣಿನ ಗೊಂಬೆಗಳ ಹಬ್ಬವೇ ಆಗಿದೆ.

ಮೊದಲೆ ಹೇಳಿದಂತೆ ಕೆಲವು ಸಮುದಾಯಗಳಿಗೆ ದೀಪಾವಳಿ ಮಾಂಸಾಹಾರಿ ಹಬ್ಬ. ಕೊರಗ ಸಮುದಾಯಕ್ಕೆ ದೀಪಾವಳಿ ಹಿರಿಯರಿಗೆ ಹೆಡೆ ಅರ್ಪಿಸುವ ಹಬ್ಬ. ಸತ್ತ ವ್ಯಕ್ತಿಗಳ ಹೆಸರಲ್ಲಿ ಮಾಡಿದ ತಾಳಿಗಳನ್ನು ನೀರುತುಂಬಿದ ಮಡಕೆಗಳ ಕಂಠಕ್ಕೆ ಕಟ್ಟುವ ವಿಶಿಷ್ಠ ಆಚರಣೆ ಇದೆ. ಕೊರಗರು ಈ ಹಬ್ಬಕ್ಕೆ ಹಂದಿಯನ್ನು ಕೊಯ್ಯುವುದು, ಹಂದಿ ಮಾಂಸ ಮಾಡುವುದು ಕೂಡ ವಿಶೇಷ.

ಗೊಂದಲಿಗ ಸಮುದಾಯವು ಈ ಹಬ್ಬದಲ್ಲಿ ಲಕ್ಷ್ಮಿಪೂಜೆಯನ್ನು ವಿಶೇಷವಾಗಿ ಮಾಡುತ್ತಾರೆ. ಗೊಂದಲಿಗಹೆಣ್ಣುಮಕ್ಕಳೆಲ್ಲಾ ಈ ಹಬ್ಬಕ್ಕೆ ಕಡ್ಡಾಯವಾಗಿ ಬರುತ್ತಾರೆ. ಅಂತೆಯೇ ಗ್ರಾಮದೇವಿಗೆ ಬಲಿಕೊಡುವ ಆಚರಣೆಯೂ ಈ ಹಬ್ಬದಲ್ಲಿ ನಡೆಯುತ್ತದೆ.

ಕರ್ನಾಟಕದ ಹಲವೆಡೆ ಗ್ರಾಮೀಣ ಭಾಗಗಳಲ್ಲಿ 'ಅಂಟಿಗೆ ಪಿಂಟಿಗೆ' ಹಬ್ಬ, ದೀಪಾವಳಿಗೆ ಪರ್ಯಾಯವಾದ ಜನಪದರ ಹಬ್ಬವೆಂಬಂತೆ ಕಾಣುತ್ತದೆ. ಇದು ದನಕಾಯುವ ಹುಡುಗರು ಮತ್ತು ದನ ಸಾಕುವವರ ನಡುವೆ ಬಾಂದವ್ಯ ಬೆಸೆವ ಸಂಕೇತಿಕತೆ ಕಾಣುತ್ತದೆ. ದನಕಾಯುವ ಹುಡುಗರು ಹುಲ್ಲು ಆಪು ರವದಿ ಸೇರಿಸಿ ಒಂದು ವಿಶಿಷ್ಠವಾದ ಆಣೇಪೀಣೇ ದೀಪ ತಯಾರಿಸಿ ಮನೆಮನೆಗಳಿಗೆ ಮರಳಿ ಅವರ ಮನೆಗಳ ದನಗಳಿಗೆ ಆರತಿ ಮಾಡುತ್ತಾ ಹಾಡು ಹೇಳುವುದಿದೆ.

ಬಿಜಾಪುರ ಬೀದರ್ ಗುಲ್ಬರ್ಗಾ ದಾರವಾಡ ಬೆಳಗಾಂ ಮೊದಲಾದೆಡೆ ಈ ಆಚರಣೆ ಕಾಣುತ್ತದೆ.

ಸಾಗರ, ಸೊರಬ, ಸಿದ್ದಾಪುರ, ಸಿರಸಿ ಭಾಗದಲ್ಲಿ ಹಲಸರ ಸಮುದಾಯವು ದೀಪಾವಳಿಯನ್ನು ಹಬ್ಬಹಾಡುವುದೆನ್ನುತ್ತಾರೆ. ಪಾಡ್ಯದಿಂದ ಮೂರು ದಿನಗಳವರೆಗೆ ರಾತ್ರಿ ಮನೆಮನೆಗೆ ದೀಪವನ್ನು ಮುಟ್ಟಿಸಿ ದವಸ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಈ ಗುಂಪನ್ನು ದೀವಳಿಗೆ ದಂಡು ಎನ್ನುತ್ತಾರೆ. ಅಂತೆಯೇ ಈ ಸಂದರ್ಭಕ್ಕೆ ಭಗವಂತಿಕೆ ಮೇಳಗಳು ಹೊಸ ಉತ್ಸಾಹಗಳೊಂದಿಗೆ ಪಾಲ್ಗೊಳ್ಳುತ್ತವೆ. ಹರಿಕಾಂತ ಸಮುದಾಯ ದೀಪಾವಳಿಯನ್ನು ಕೃಷಿಸ್ವಾಮಿ ಹಬ್ಬ ಎಂದು ಕರೆಯುತ್ತಾರೆ. ಇವರನ್ನು ಅಂಟಿಗೆ ಪಿಂಟಿಗೆಯವರು ಎಂದೂ ಕರೆಯುತ್ತಾರೆ. ಹೀಗೆ ಅಂಟಿಗೆ ಪಿಂಟಿಗೆ ಸಂಪ್ರದಾಯದ ಹಾಡು ಹೇಳುವುದು ಸ್ವಲ್ಪ ಫರಕುಗಳೊಂದಿಗೆ ಬೇರೆ ಬೇರೆ ಭಾಗಗಲ್ಲಿ ನೆಲೆಸಿದೆ. ತೀರ್ಥಹಳ್ಳಿ ಚಿಕ್ಕಮಗಳೂರು ಭಾಗದಲ್ಲಿ ಅಂಟಿಗೆ ಪಿಂಟಿಗೆ ಅಂದರೆ, ಶಿರಸಿ, ಸಿದ್ದಾಪುರ ಭಾಗದಲ್ಲಿ ಭಿಂಗಿ ಪದಗಳೆಂದೂ, ಹೊಸನಗರ ಸಾಗರದ ಕಡೆ ದೀಪನೀಡುವುದೆಂದೂ, ಶಿವಮೊಗ್ಗ ಸೊರಬ ಭಾಗದಲ್ಲಿ ಬಲ್ಲಾಳಿ ಪದಗಳೆಂದೂ ಭಿನ್ನವಾಗಿ ಗುರುತಿಸಲಾಗುತ್ತದೆ. ಈ ಸಂಪ್ರದಾಯವನ್ನು ಪ್ರಾದೇಶಿಕವಾಗಿ ಆಡೀಪೀಡೀ, ಆವಂಟಿಗ್ಯೋ ಪಾವಂಟಿಗ್ಯೋ ಅಂಟಿಸುಂಟಿ ಮುಂತಾಗಿ ಕರೆಯುತ್ತಾರೆ.

ಬಹುಪಾಲು ಪಶುಪಾಲಕ ಜಾತಿಸಮುದಾಯಗಳು ಈ ಹಬ್ಬದಲ್ಲಿ ಭಾಗಿಯಾಗುತ್ತವೆ.

ಇಷ್ಟೆಲ್ಲಾ ದೀಪಾವಳಿ ವೈವಿದ್ಯವನ್ನೂ ಹೇಳಿದ ಮೇಲೂ, ಮತ್ತೊಂದು ಮಗ್ಗಲಿದೆ. ಕರ್ನಾಟಕದ ಸಾವಿರಾರು ಹಳ್ಳಿಗಳಿಗೆ ದೀಪಾವಳಿ ಹಬ್ಬ ಗೊತ್ತೇ ಇಲ್ಲ. ನನ್ನ ಬಾಲ್ಯದ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಹಾರಕನಾಳೆಂಬ 300 ಮನೆಗಳ ಗ್ರಾಮದಲ್ಲಿ ಒಂದು ಜಂಗಮರ ಮನೆಯಲ್ಲಿ ಮಾತ್ರ ದೀಪಾವಳಿ ಮಾಡುತ್ತಿದ್ದರು. ಇಡೀ ಊರು ಈ ಮನೆಯನ್ನು ಕೌತುಕದಿಂದ ನೋಡುತ್ತಿತ್ತು. ಅಂತೆಯೇ ಹಾರಕನಾಳು ಸಮೀಪದ ಕೊಟ್ಟೂರಿನಲ್ಲಿ ಕೃಷಿಮಾರುಕಟ್ಟೆಯ ದಲ್ಲಾಳಿ ಅಂಗಡಿಗಳಲ್ಲಿ ಅದ್ದೂರಿಯಾಗಿ ದೀಪಾವಳಿಯನ್ನು ಆಚರಿಸುತ್ತಾರೆ. ಆಗ ನಮ್ಮೂರಿನವರು ಕೃಷಿಸಾಲ ಪಡೆದ ದಲ್ಲಾಳಿ ಅಂಗಡಿಯವರ ದೀಪಾವಳಿ ಪೂಜೆಗೆ ತೆರಳುತ್ತಿದ್ದರು. ಲಕ್ಷ್ಮಿಪೂಜೆಯ ದಿನ ಹಳ್ಳಿಗರು ತಮ್ಮ ಟವಲ್ಲುಗಳಲ್ಲಿ ಪೂಜೆಯಲ್ಲಿ ಕೊಟ್ಟ ಹಣ್ಣು, ಸಿಹಿತಿಂಡಿಗಳನ್ನು ಕಟ್ಟಿಕೊಂಡು ಬರುತ್ತಿದ್ದರು. ಇದು ಹಾರಕನಾಳಿನ ಪಾಲಿನ ದೀಪಾವಳಿಯಾಗಿತ್ತು. ಇದನ್ನು ನೋಡಿದರೆ ಎಷ್ಟೋ ಹಳ್ಳಿಗಳಲ್ಲಿ ದೀಪಾವಳಿ ಎಂದರೆ ಹಣವಿದ್ದ ಶ್ರೀಮಂತರು ಮಾಡುವ ಲಕ್ಷ್ಮಿಪೂಜೆಯ ಹಬ್ಬವೆಂದೂ, ನಗರದವರು ಮಾಡುವ ಹಬ್ಬವೆಂದೂ ತಿಳಿದಿದ್ದಾರೆ.

ಹೀಗೆದೀಪಾವಳಿಯನ್ನುಗ್ರಾಮಜಗತ್ತಿನಹಾಜರಿಯ ವೈವಿದ್ಯ ಮತ್ತು ಗೈರುಹಾಜರಿಯ ನೆಲೆಯಲ್ಲಿ ಮರು ಪರಿಶೀಲಿಸುವ ಅಗತ್ಯವಿದೆ. ಒಂದಂತೂ ಸತ್ಯ ಜಗತ್ತು ಏಕರೂಪವಾಗುತ್ತಿರುವ ಹೊತ್ತಿನಲ್ಲಿ ದೀಪಾವಳಿ ತಮ್ಮ ಬಹುಸಂಸ್ಕೃತಿಯ ನೆಲೆಯಲ್ಲಿ ಬಹುತ್ವದ ಸಂಕೇತವಾಗಿ ಮುಖ್ಯವಾಗುತ್ತದೆ.





# ನಾ ಕಂಡಂತೆ ದೀಪಾವಳಿ!

ಬರೀ ಬಾಯಿ ಮಾತಲ್ಲೇ ಹೇಳುವರು
ದೀಪದಿಂದ ದೀಪವ ಹಚ್ಚಬೇಕು ಮಾನವ
ಎಂದು
ಆದರೆ ಈಗಲೂ ಉಳ್ಳವರ ಮನೆಯಲ್ಲೇ
ಬೆಳಗುತ್ತಿವೆ ದೀಪಾವಳಿಯ ದೀಪಗಳು ..!

ಅಸಲಿಗೆ ಬಡವರ ಮನೆಯಲ್ಲಿ ದೀಪಗಳೂ
ಇಲ್ಲ, ಎಣ್ಣೆ ಯಂತೂ ಮೊದಲೇ ಇಲ್ಲ,
ಇನ್ನೆಲ್ಲಿಂದ ಹಚ್ಚಬೇಕು ದೀಪದಿಂದ ದೀಪ .
ಆದರೂ ಹೇಳುತ್ತೇವೆ ಹಚ್ಚು ಮಾನವ
ದೀಪದಿಂದ ದೀಪ ?

ಬಡವರ ಬದುಕೊಂದು ಕಗ್ಗತ್ತಲೆಯ ಕೂಪ
ಹಬ್ಬಗಳು ಬಂತೆಂದರೆ ಬಡವರ ಪಾಲಿಗೆ
ಅದೊಂದು ದೊಡ್ಡ ಶಾಪ !,,,
ಆದರೂ ಹೇಳು(ತ್ತಾರೆ)ತ್ತೇವೆ ಹಚ್ಚು ಮಾನವ
ದೀಪದಿಂದ ದೀಪ ?

ಬಾಲ್ಯದಲ್ಲಿ ಬೆರಗುಗಣ್ಣಿನಿಂದ ನೋಡುತ್ತಿದ್ದೇವು
ಸಿರಿವಂತರ ಮನೆಯ ದೀಪ,,, ಕೇಳುತ್ತಿದ್ದೇವು
ಪಟಾಕಿ ಸಿಡಿಮದ್ದಿನ ಸದ್ದು, ಮರುದಿನ ನಮ್ಮ
ಮನೆಯ ಮುಂದೆ ಅರೆಬೆಂದ ಪಟಾಕಿಗಳ
ಸದ್ದು !
ಆದರೂ ಹೇಳುತ್ತೇವೆ ಹಚ್ಚು ದೀಪದಿಂದ
ದೀಪ .?

ಬಡವರ ಮನೆಗಳಲ್ಲಿಯೂ ಇವೆ ಪ್ರಪಂಚವನ್ನೇ
ಬೆಳಗುವ ಅದ್ಭುತ ದೀಪ( ಗಳು),, ಆದರೆ
ಅವುಗಳಿಗೆ
ಇಡುತ್ತಾರೆ ಎಣ್ಣೆ ಇಲ್ಲದ ಬತ್ತಿ !
ಅವುಗಳಿಗೆ ಸಿಕ್ಕರೆ ಸಣ್ಣದೊಂದು ಸ್ಫೂರ್ತಿ
ಬೆಳಗುವುದು ದೇಶದ ಕೀರ್ತಿ .

ಆದರೆ ಇದು ಕನಸು, ಕನವರಿಕೆ ಮಾತ್ರ
ನನಸಾಗುವ ಭರವಸೆಯೂ ಇಲ್ಲ,
ಆದರೂ ಭರವಸೆಯ ಬದುಕಲ್ಲಿ ಹೇಳುತ್ತಾರೆ,
ಕೇಳುತ್ತಾರೆ,

# ರಾಜ್ಯ ವಾಲ್ಮೀಕಿ ಪುರಸ್ಕೃತರಾದ ಎನ್.ವೈ.ಹನುಮಂತಪ್ಪ ಅವರಿಗೆ ಗೌರವ ಸಮರ್ಪಿಸಿದ ಶಾಸಕ ಟಿ.ರಘುಮೂರ್ತಿ

» **ಚಳ್ಳಕೆರೆ**

ಇಂದು ಚಳ್ಳಕೆರೆ ಕ್ಷೇತ್ರದ ಶಾಸಕ ಟಿ ರಘುಮೂರ್ತಿ ಅವರು ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಮಾಜಿ ಸಂಸದರು ಎನ್. ವೈ.ಹನುಮಂತಪ್ಪ ಅವರಿಗೆ ವಾಲ್ಮೀಕಿ ಜಯಂತಿಯಂದು ರಾಜ್ಯ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪಡೆದ ಹಿನ್ನಲೆಯಲ್ಲಿ ಇಂದು ಅವರ ಗೃಹಕ್ಕೆ ಭೇಟಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶಾಸಕ ಟಿ.ರಘುಮೂರ್ತಿ ಅವರಿಗೆ ಎನ್.ವೈ.ಹನುಮಂತಪ್ಪ ಅವರು ಸನ್ಮಾನಿಸಿದರು.



# ನ.15ರಂದು ಅತಿಸಾರ ಭೇದಿ ನಿಯಂತ್ರಣ ಪಾಕ್ಷಿಕ ಉದ್ಘಾಟನಾ ಕಾರ್ಯಕ್ರಮ

» **ಚಿತ್ರದುರ್ಗ**

ಜಿಲ್ಲಾ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆ ವತಿಯಿಂದ ಇದೇ ನವೆಂಬರ್ 15 ರಿಂದ 28 ರವರೆಗೆ ಅತಿಸಾರ ಭೇದಿ ನಿಯಂತ್ರಣ ಪಾಕ್ಷಿಕ (ಓ.ಆರ್.ಎಸ್ ಮತ್ತು ಝಿಂಕ್ ಮಾತ್ರೆ) ನವಜಾತ ಶಿಶುವಿನ ವಾರ ಮತ್ತು ನ್ಯುಮೋನಿಯವನ್ನು ಯಶಸ್ವಿಯಾಗಿ ಕೊನೆಗಾಣಿಸುವ ಸಾಮಾಜಿಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ನ.15ರಂದು ಬೆಳಿಗ್ಗೆ 10ಕ್ಕೆ ನಗರದ ಸ್ಟೇಡಿಯಂ ರಸ್ತೆಯ ಬುದ್ಧನಗರ ನಗರ ಆರೋಗ್ಯ ಕೇಂದ್ರದಲ್ಲಿ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

1.54 ಲಕ್ಷ ಮಕ್ಕಳ ಗುರಿ: ಅತಿಸಾರ ಭೇದಿ ನಿಯಂತ್ರಣ ಪಾಕ್ಷಿಕ (ಓ.ಆರ್.ಎಸ್ ಮತ್ತು ಝಿಂಕ್ ಮಾತ್ರೆ) ಕಾರ್ಯಕ್ರಮ ನ.15 ರಿಂದ 28 ರವರೆಗೆ ಹಮ್ಮಿಕೊಳ್ಳಲಾಗಿದ್ದು, ಈ ಪಾಕ್ಷಿಕದಲ್ಲಿ 0–5 ವರ್ಷದ 1,54,500 ಮಕ್ಕಳಿಗೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಮನೆ ಭೇಟಿ ನೀಡಿ ಓ.ಆರ್.ಎಸ್ ಪಾಕೇಟ್ ವಿತರಿಸಲಾಗುವುದು.







Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T